ನಗೆಯಿಂದಾಗಿ ವಾಸುದೇವರು ಈಗೀಗ ಹೆಚ್ಚಾಗಿ ಆಕೆ ಕೆಲಸ ಮಾಡುಲ್ಲಿಗೆ ಬಂದು ನಿಲ್ಲುವಂತಾಗಿತ್ತು.

ಸೋಮ, ಪಾಮರನಾದರೂ ಒಡೆಯನಿಗೆ ತನ್ನ ಮಡದಿಯ ಸಾಮಿಪ್ಯ ಖುಷಿ ಕೊಡುತ್ತಿದೆ ಎನ್ನುವುದನ್ನು ತಿಳಿದುಕೊಳ್ಳಲಾರದಷ್ಟು ಬೋದಾಳನಾಗಿರಲಿಲ್ಲ. ಆದರೆ ಒಡೆಯ ವಾಸುದೇವರ ಮೇಲೆ ಆತನಿಗೆ ಅವಿಚ್ಛಿನ್ನವಾದ ಗೌರವ ಮತ್ತು ವಿಶ್ವಾಸವಿತ್ತು. ಅವರು ದೇವಿ ದುಡಿಯುತ್ತಿರುವಲ್ಲಿ ಬಂದು ನಿಲ್ಲುತ್ತಲೇ ಆತ ಬೇಕೆಂದೇ ದೂರ ಹೋಗಿ ಕೆಲಸದಲ್ಲಿ ತೊಡಗಿಕೊಳ್ಳುತ್ತಿದ್ದ.

ಸೋಮನ ಈ ಸ್ವಾಮಿನಿಷ್ಠೆ ಮತ್ತು ದೇವಿಯ ಮೇಲಿನ ವ್ಯಾಮೋಹದಿಂದಾಗಿ ವಾಸುದೇವರು ಆತನಿಗೀಗ ಹಣ ನೀಡುವುದರಲ್ಲಿ ಹೆಚ್ಚು ಧಾರಾಳಿಯಾಗತೊಡಗಿದ್ದರು.

ಕೆಲ ಕಾಲದಲ್ಲೇ ಅವರು ತನ್ನ ಈ ಉದಾರತೆಯ ವ್ಯತಿರಿಕ್ತ ಪರಿಣಾಮವನ್ನು ಎದುರಿಸಬೇಕಾಗಿ ಬಂದಿತು. 'ಹೌದಾ ವಾಸು... ಸೋಮನಿಗೆ ಆತ ಕೇಳಿದಷ್ಟು ಹಣ ಯಾಕೆ ಕೊಡ್ತಿ ನೀನು? ಆತ ಈಗ ಕಂಠ ಪೂರ್ತಿ ಕುಡಿದುಬಂದು ಗುಡಿಸಲ ಹೊರಗೆ ಬಿದ್ದುಕೊಳ್ತಾನಂತೆ. ಪಾಪದ ಆ ಹೆಣ್ಣು ನನ್ನಲ್ಲಿ ಹೇಳಿಕೊಂಡು ಕಣ್ಣೀರು ಹಾಕಿತು...' ಎಂದು ಆ ದಿನ ತಾಯಿ ಆಕ್ಷೇಪಣೆಯ ಧ್ವನಿಯಲ್ಲಿ ಹೇಳಿದಾಗ ವಾಸುದೇವರು ಪೆಚ್ಚಾಗಿ ಬಿಟ್ಟರು! 'ನನಗಿದು ಗೊತ್ತಿರಲಿಲ್ಲ ಅಮ್ಮ...' ಎಂದು ಸಮಜಾಯಿಸಿ ಕೊಟ್ಟರೂ ಮನಸ್ಸಿನ ನೆಮ್ಮದಿಯೇಕೋ ಆ ಕ್ಷಣದಿಂದಲೇ ಕದಡಲಾರಂಭಿಸಿತ್ತು.

ಸೋಮನ ವ್ಯವಹಾರವೂ ಅವರಿಗೆ ವಿಚಿತ್ರವಾಗಿ ಕಂಡಿತು! 'ಯೌವನ ತುಳುಕುತ್ತಿರುವ ಚೆಲುವೆ ದೇವಿಯನ್ನು ಗುಡಿಸಲೊಳಗೆ ಬಿಟ್ಟು, ಹೊರಗೆ ಬಿದ್ದುಕೊಳ್ಳಲು ಆತನಿಗೆ ಮನಸ್ಸಾದರೂ ಹೇಗೆ ಬರುತ್ತದೆ? ದೇವಿಯ ಮೇಲಿನ ತನ್ನ ಆಸ್ಥೆಯ ಕಾರಣಕ್ಕೆ ಜಗಳವಾಗಿ ಆಕೆಯಲ್ಲಿ ಮುನಿಸಿಕೊಂಡು ಹೀಗೆ ಮಾಡುತ್ತಿರಬಹುದೆ? ತನ್ನಿಂದಾಗಿಯೇ ದೇವಿ ನೊಂದುಕೊಳ್ಳುವ ಸ್ಥಿತಿ ಉಂಟಾಯಿತೇನೋ? ಎಂಬೆಲ್ಲ ಚಿಂತೆಯಲ್ಲಿ ವಾಸುದೇವರು ಬೇಯತೊಡಗಿದರು. ಕೊನೆಗೊಮ್ಮೆ 'ಸೋಮ ಕುಡಿದು ಬರುವಾಗಲೇ ಆತನನ್ನು ಹಿಡಿದು, ವಿಚಾರಿಸಿ ಸರಿದಾರಿಗೆ ತರಬೇಕು' ಎನ್ನುವ ನಿರ್ಧಾರಕ್ಕೆ ಬಂದ ನಂತರವಷ್ಟೇ ಅವರ ಮನಸ್ಸಿಗೆ ತುಸು ಸಮಾಧಾನವಾಯಿತು.

★★★

ಸೋಮನ ಗುಡಿಸಲು ದಾರಿಯ ಮರದಡಿಯಲ್ಲಿ ರಾತ್ರಿ ಬಹು ಹೊತ್ತು ಕಾದ ನಂತರ ತೂರಾಡುತ್ತ ಬಂದ ಆತ ವಾಸುದೇವರಿಗೆ ಎದುರಾದ. ತಟ್ಟನೆ ಆತನನ್ನು ತಡೆದು, "ಏನಿದು ಸೋಮಾ? ಮೂಗಿನ ತನಕ ಕುಡಿದಿದ್ಯಾ ಹೇಗೆ?" ಎಂದು ಗದರಿದರು. ಅನೀರೀಕ್ಷಿತವಾಗಿ ಒಡೆಯರನ್ನ ಅಲ್ಲಿ ಕಂಡ ಸೋಮ, ಬೆರಗಾಗುತ್ತಾ, "ನನ್ನ ದಣೀ, ನೀವೂ ಈ ರಾತ್ರಿಯಲ್ಲಿ ಇಲ್ಲಿ?" ಎಂದು ತೊದಲಿದವನು, ವಿನಾ ಕಾರಣ ಗೋಳೋ ಎಂದು ಅಳಲು ಶುರುವಿಟ್ಟ!... "ಇದೆಂಥಾ ಅವಸ್ಥೆ ನಿಂದು? ಸುಮ್ಮನಿರ್ತಿಯಾ, ಇಲ್ಲಾ ಕೆನ್ನೆಗೆರಡು ಬಿಗಿಯಲಾ?" ಎಂದು ಸಹನೆ ಕಳೆದುಕೊಂಡ ವಾಸುದೇವರು ಮತ್ತೆ ಆತನನ್ನು ಗದರಿದರು. ಆದರೆ ಸೋಮ, ವಿಚಲಿತನಾಗದೆ, "ಹೊಡೆಯಿರಿ ಒಡೆಯಾ... ನನ್ನ ಪ್ರಾಣ ನಿಮ್ಮ ಕೈಲೇ ಹೋಗಲಿ... ನನ್ನ ದೇವಿಯ ಕೈ ಮಾತ್ರ ಬಿಡಬೇಡಿ..." ಎನ್ನುತ್ತಾ ತನ್ನ ಆಲಾಪ ಮತ್ತಷ್ಟು ಜಾಸ್ತಿ ಮಾಡಿದ! ಸೊಯವೇ ಇಲ್ಲದ ಈತನಿಗೀಗ ಏನು ಹೇಳಿದರೂ ಅದು ವ್ಯರ್ಥ ಎಂದು ಮನಗಂಡ